**ದಿಃ 24.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

5. ನನ್ನ ತಾಯಿಯ ಹೆಸರು ವೆಂಕಮ್ಮ ಭೀಮಪ್ಪ ಮುಳಗುಂದ. ನನ್ನ ತಾಯಿ 1980 ರಲ್ಲಿ ತೀರಿಕೊಂಡಿರುತ್ತಾರೆ. ಸರ್ವೆ ನಂ.200/ಡಿ ರಲ್ಲಿ 5 ಎಕರೆ 25 ಗುಂಟೆ ಆಸ್ತಿ ಹೂವಿನಶಿಗ್ಗಿ ಗ್ರಾಮದಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಇದೆ. ಸದರಿ ಆಸ್ತಿಯನ್ನು ನಮ್ಮ ತಾಯಿ ಜೀವಂತವಿರುವಾಗ ನೊಂದಾಯಿತ ದಾಖಲೆಯ ಮೂಲಕ ನಮಗೆ ಯಾರಿಗೂ ಸಹ ವರ್ಗಾವಣೆ ಮಾಡಿಲ್ಲ. ನಿಡಿ.39 ರಿಂದ 41 ದಾಖಲೆಗಳಲ್ಲಿ ವೆಂಕಮ್ಮ ಭೀಮಪ್ಪ ಮುಳಗುಂದ ಎಂಬ ಹೆಸರು ಇದೆ ಎಂದರೆ ಸರಿ. ನಿಡಿ.42 ದಾಖಲೆಯಲ್ಲಿ ಮೊದಲಿಗೆ ನನ್ನ ತಾಯಿಯ ಹೆಸರು, ನಂತರ ನಮ್ಮ ತಂದೆ ಹಾಗೂ ಅದಾದ ನಂತರ ನಮ್ಮ ಹೆಸರುಗಳು ಇವೆ ಎಂದರೆ ಸರಿ. ಸದರಿ ನಿಡಿ.39 ರಿಂದ 41 ದಾಖಲೆಗಳು 1979 ರ ದಾಖಲೆಗಳು ಎಂದರೆ ಸರಿ. ನಮ್ಮ ತಂದೆ ತಾಯಿ ಕೂಡಿ ಇದ್ದಾಗಲೇ ಸದರಿ ದಾಖಲೆಗಳಲ್ಲಿ ತೋರಿಸಿರುವ ಸಾಲವನ್ನು ನನ್ನ ತಾಯಿ ತುಂಬಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಾಯಿ 1980 ರಲ್ಲಿಯೇ ತೀರಿಕೊಂಡಿರುತ್ತಾರೆ ಹಾಗೂ ನಾವು ಸಾಲ ತುಂಬಿರುತ್ತೇವೆಂದು ನುಡಿಯುತ್ತಾರೆ. ನಾವು ಸಾಲ ತುಂಬಿರುತ್ತೇವೆಂದು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ನಮ್ಮ ತಂದೆಯ ಕೈಗೆ ಹಣ ಕೊಟ್ಟೆವು ಅವರು ಸಾಲ ತುಂಬಿರುತ್ತಾರೆಂದು ನುಡಿಯುತ್ತಾರೆ. ನನ್ನ ತಾಯಿ ಹೆಸರಿನಲ್ಲಿದ್ದ ಆಸ್ತಿಯಿಂದ ಬಂದ ಉತ್ಪನ್ನದಿಂದ ನಿಡಿ.39 ರಿಂದ 41 ದಾಖಲೆಗಳಲ್ಲಿ ತೋರಿಸಿರುವ ಸಾಲವನ್ನು ನನ್ನ ತಾಯಿ ತೀರಿಸಿರುತ್ತಾರೆಂದರೆ ಸರಿಯಲ್ಲ. ನೀವು ಸಾಲ ತೀರಿಸಿರುತ್ತಿರೆಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ತಂದೆ ತಾಯಿಯ ಹತ್ತಿರ ಹಣ ಕೊಟ್ಟ ಬಗ್ಗೆ ಹೇಗೆ ದಾಖಲೆ ಇರಬೇಕು ಎಂದು ನುಡಿಯುತ್ತಾರೆ. ನಾವು ಜಮೀನಿನಲ್ಲಿ ದುಡಿದ ಉತ್ಪನ್ನದಿಂದ ಸಾಲ ತೀರಿಸಿರುತ್ತೇವೆಂದರೆ ಸರಿಯಲ್ಲ. 1979 ರಲ್ಲಿ ನಾವೆಲ್ಲ ಕೂಡಿಯೇ ಇದ್ದೇವು ಎಂದರೆ ಸರಿ. ನಾನೇ ಸ್ವತಃ ದುಡಿದು ಹಣವನ್ನು ನಮ್ಮ ತಂದೆಯ ಕೈಗೆ ಕೊಟ್ಟಿರುತ್ತೇನೆ ಹಾಗೂ ಅವರು ಸಾಲ ತೀರಿಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**